ಹೌದು

ಇ) ಬಸ್ ಡಿಪೋ ಎಷ್ಟು ಸಮಯದಲ್ಲಿ ಮಾಡಲಾಗುವುದು?

ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡನಂತರ ಸಂಸ್ಥೆಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಮುಂದಿನ ಕ್ರಮ ಜರುಗಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1076(1504)**
ಸದಸ್ಯರ ಹೆಸರು **ಶ್ರೀ ಅಂಗಾರ ಎಸ್ (ಸುಳ್ಯ)**
ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಉಪ್ಪನಂಗಡಿ–ಕಡಬ–ಸುಬ್ರಹಣ್ಯ ರಸ್ತೆಯು ತೀವ್ರ ಹದಗೆಟ್ಟಿರುವ ಕಾರಣ ಮರು ಡಾಂಬರೀಕರಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ,

ಹೌದು

ಆ) ಇದ್ದಲ್ಲಿ, ಎಷ್ಟು ಸಮಯದಲ್ಲಿ ಮರು ಡಾಂಬರೀಕರಣ ಮಾಡಲಾಗುವುದು?

ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ರೂ 22 5 ಕೋಟಿಗಳ ಅಂದಾಜು ಮೊತ್ತದ ಪ್ರಸ್ತಾವನೆಯು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಕೈಗೊಳ್ಳುವ ಬಗ್ಗೆ ಪರಿಶೀಲನೆಯಲ್ಲಿದ್ದು, ಅನುದಾನದ ಲಭ್ಯತೆಗನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1077(1474)**
ಸದಸ್ಯರ ಹೆಸರು **ಶ್ರೀ ಅಂಜನಾಮೂರ್ತಿ (ನೆಲಮಂಗಲ)**
ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)**

ಅ) ವಿಶ್ವ ಬ್ಯಾಂಕಿನ ನೆರವಿನ ಯೋಜನೆಯಡಿಯಲ್ಲಿ 1149 ಕೋಟಿ ರೂ ಗಳ ವೆಚ್ಚದಲ್ಲಿ ಪುರಸಭೆ ಯೋಜನೆಯ ಮೂಲಕ ರಾಜ್ಯದ ಪಟ್ಟಣಗಳಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸಲು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ,

ಹೌದು 1364 ಕೋಟಿ ರೂ ಗಳ ವೆಚ್ಚದಲ್ಲಿ ಕರ್ನಾಟಕ ಪೌರ ಸುಧಾರಣಾ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ

ಆ) ಈ ಕಾಮಗಾರಿಗಳಿಗೆ ಬಿಡುಗಡೆಯಾದ ಹಣವೆಷ್ಟು,

ಇಲ್ಲಿಯವರೆಗೆ ಮೂಲಭೂತ ಸೌಕರ್ಯ ಅಭಿವೃದ್ಧಿಗೆ, ಬೆಂಗಳೂರು ಮಹಾ ನಗರ ಪಾಲಿಕೆಗೆ ರೂ 44 12 ಕೋಟಿ ಮತ್ತು ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಗೆ ರೂ 100 ಕೋಟಿ ಬಿಡುಗಡೆಯಾಗಿರುತ್ತದೆ

ಇ) ಈ ಯೋಜನೆಯಲ್ಲಿ ನೆಲಮಂಗಲ ಪಟ್ಟಣವು ಸೇರಿದೆಯೇ,

ಇಲ್ಲ

ಈ) ಸೇರದಿದ್ದಲ್ಲಿ ಕಾರಣವೇನು?

ಈ ಯೋಜನೆಯಡಿ ಹಣಕಾಸು ಲಭ್ಯತೆಯ ಮಿತಿಯೊಳಗೆ ಹಾಗೂ ನಿಗದಿಪಡಿಸಿದ ಅರ್ಹತಾ ಮಾನದಂಡ ಆಧಾರದ ಮೇಲೆ ಮೂಲ ಸೌಕರ್ಯ ಲಭಿವೃದ್ಧಿಗಾಗಿ ಪಟ್ಟಣಗಳನ್ನು ಆಯ್ಕೆ ಮಾಡಲಾಗಿರುತ್ತದೆ ಈ ಮಿತಿಯಿಂದಾಚೆ ಹೆಚ್ಚಿನ ಹಣಕಾಸು ಸೌಲಭ್ಯ ಇಲ್ಲದಿರುವುದರಿಂದ, ನೆಲಮಂಗಲ ಪಟ್ಟಣ ಸೇರಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1078(1475)**
ಸದಸ್ಯರ ಹೆಸರು	**ಶ್ರೀ ಅಂಜನಾಮೂರ್ತಿ (ನೆಲಮಂಗಲ)**
ಉತ್ತರಿಸುವ ಸಚಿವರು	**ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)**

ಅ) ಖಾಸಗಿಯವರು ಒಂದೇ ನಂಬರ್‌ನಲ್ಲಿ ಎರಡು–ಮೂರು ಬಸ್ಸುಗಳನ್ನು ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

ಆ) ಆ ರೀತಿ ಅವ್ಯವಹಾರಕ್ಕೆ ತೊಡಗಿರುವ ವಾಹನಗಳು ಎಷ್ಟು?

ಏಳು ವಾಹನಗಳು

ಇ) ಈ ವಾಹನಗಳು ಯಾರ ಮಾಲೀಕತ್ವದಲ್ಲಿದೆ?

ಸದರಿ ಏಳು ವಾಹನಗಳು ಈ ಕೆಳಕಂಡವರ ಮಾಲೀಕತ್ವದಲ್ಲಿ ಇರುತ್ತದೆ –

1 KA-01/A-9117- ಶ್ರೀ ಬಿ ಎಸ್ ಇಮ್ರಾನ್‌ಖಾನ್ ಬಿನ್ ನೂರುಲ್ಲಾ ಖಾನ್, 186, MK ರಸ್ತೆ, ಶಂಕರಪುರ, ಬೆಂಗಳೂರು

2 KA-01/B-5454-ಶ್ರೀ ಬಿ ಜಡ್ ಜಮೀರ್ ಅಹ್ಮದ್‌ಖಾನ್, ನಂ 362, TSP ರಸ್ತೆ, ಕಲಾಸಿಪಾಳ್ಯಂ, ಬೆಂಗಳೂರು–2